ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1098(1515)
ಸದಸ್ಯರ ಹೆಸರು : ಶ್ರೀ ಆರ್. ಧ್ರುವನಾರಾಯಣ (ಸಂತೇಮರಳ್ಳಿ)
ಉತ್ತರಿಸುವ ಸಚಿವರು : ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು.)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು ಎಷ್ಟು ವಿಭಾಗಗಳಿವೆ.

13 ವಿಭಾಗಗಳಿವೆ.

ಆ) ಈ ವಿಭಾಗಗಳ ಮುಖ್ಯಸ್ಥರನ್ನು ನಿಯೋಜಿಸಲು ಸರ್ಕಾರ ಅನುಸರಿಸುವ ಮಾನದಂಡವೇನು.

ನಿಗಮದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ದರ್ಜೆ–1 ಹಿರಿಯ/ ದರ್ಜೆ–1 ಆಯ್ಕೆ ಶ್ರೇಣಿ ಅಧಿಕಾರಿಗಳನ್ನು ಈ ಹುದ್ದೆಗೆ ನಿಯೋಜಿಸಲಾಗುತ್ತದೆ.

ಇ) ಎಷ್ಟು ವಿಭಾಗಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಧಿಕಾರಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಾಗಿ ನಿಯೋಜಿಸಲಾಗಿದೆ. (ವಿವರ ನೀಡುವುದು)

2 (ಎರಡು)

1) ಕೆಂಪೇಗೌಡ ಬಸ್ ನಿಲ್ದಾಣ.

2) ಚಿಕ್ಕಬಳ್ಳಾಪುರ.

ಈ) ಓರ್ವ ಅಧಿಕಾರಿಯನ್ನು ಎಷ್ಟು ವರ್ಷಗಳ ಕಾಲ ಸತತವಾಗಿ ವಿಭಾಗೀಯ ನಿಯಂತ್ರಣಾಧಿಕಾರಿ ಹುದ್ದೆಗೆ ನಿಯೋಜಿಸಬಹುದಾಗಿದೆ.

ಸರ್ಕಾರದ ವರ್ಗಾವಣಾ ನೀತಿಯಂತೆ ಹಾಗೂ ಸಂಸ್ಥೆಯ ಆಡಳಿತದ ಹಿತ ದೃಷ್ಟಿಯಿಂದ 2 ರಿಂದ 3 ವರ್ಷಗಳ ಕಾಲ ಒಂದು ವಿಭಾಗದ ವಿಭಾಗ ನಿಯಂತ್ರಣಾಧಿಕಾರಿಯಾಗಿ ನಿಯೋಜಿಸಲಾಗುವುದು. ಆದರೆ ಸಂಸ್ಥೆಯ ಆಡಳಿತದ ಹಿತ ದೃಷ್ಟಿಯಿಂದ ಈ ಅವಧಿಯನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡಲಾಗುವುದು.

ಉ) ಕೆಲವು ಅಧಿಕಾರಿಗಳು ವಿಭಾಗೀಯ ನಿಯಂತ್ರಣಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ. ವಿಭಾಗಗಳು ಸತತವಾಗಿ ನಷ್ಟ ಹೊಂದುತ್ತಿದ್ದರೂ ಅಂತಹ ಅಧಿಕಾರಿಗಳನ್ನು ಪದೇ ಪದೇ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ನಿಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇಲ್ಲ.

ಊ) ಬಂದಿದ್ದರೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಉದ್ಭವಿಸುವುದಿಲ್ಲ.